ಶ್ರೀ ವಾಟಾಳ್ ನಾಗರಾಜ್: ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರ ಉತ್ತರ ಸರಿ ಇಲ್ಲವೆಂದು ಹೇಳುತ್ತಿದ್ದೇನೆ. ಪೊಲೀಸ್‌ನವರಿಗೆ ಉಚಿತವಾಗಿ ಕೊಡುತ್ತಿದ್ದರು. ಅದನ್ನು 2 ತಿಂಗಳಿಂದ ನಿಲ್ಲಿಸಿದ್ದಾರೆ, ಏತಕ್ಕೆ ಎಂದು ಸರ್ಕಾರ ಉತ್ತರ ಹೇಳುತ್ತಿಲ್ಲ.

ಅಧ್ಯಕ್ಷರು : ನಿಲ್ಲಿಸಿಲ್ಲ ಎಂದು ಅವರು ಹೇಳಿದರಲ್ಲಾ

ಶ್ರೀ ಡಿ. ಆರ್. ಪಾಟೀಲ್ : ಈ ಒಂದು ಪ್ರಶ್ನೆಗೆ ಹಣಕಾಸು ಸಚಿವರು ಉತ್ತರ ಕೊಡಲಿ, ಮಾನ್ಯ ಸಿದ್ದರಾಮಯ್ಯನವರೇ, ಈಗ 3.50 ಪೈಸೆಗೆ ಅಕ್ಕಿ ಏನು ಮಾರುತ್ತಿದ್ದೀರಿ ಅದನ್ನು 3.20 ಪೈಸೆಗೆ ಮಾರುವುದರಿಂದ, 2.50 ರೂಪಾಯಿಗೆ ಮಾರುವ ಗೋಧಿಯನ್ನು 2 ರೂಪಾಯಿಗೆ ಮಾರಿದರೆ ನಿಮಗೆ ಆಯವ್ಯಯದಲ್ಲಿ ಏನು ಸಬ್ಸಿಡಿ 190 ಕೋಟಿ ಇಟ್ಟಿದ್ದೀರಿಲ್ಲಾ ಆಹಾರಧಾನ್ಯಕ್ಕೆ ಅದಕ್ಕಿಂತ ಹೊರೆ ಕಡಿಮೆ ಆಗುತ್ತದೆಯೋ ಹೆಚ್ಚು ಆಗುತ್ತದೆಯೋ ಅಷ್ಟು ತಿಳಿಸಿ ಬಿಡಿ ಸಾಕು.

ಶ್ರೀ ಸಿದ್ದರಾಮಯ್ಯ : ನಾವು 3.20 ಪೈಸೆಯಿಂದ 3.50 ಪೈಸೆಗೆ ಜುಲೈ 1ನೇ ತಾರೀಖಿನಿಂದ ಜಾರಿಗೆ ತರಬೇಕು ಎಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ಕಾರಣ ಏನೆಂದರೆ ಇಡೀ ದೇಶದಲ್ಲಿ 3.50 ಪೈಸೆಗೆ ಹಸಿರು ಕಾರ್ಡ್ ಮೂಲಕ ಎಲ್ಲಾ ರಾಜ್ಯಗಳಿಗೂ ಕೂಡ ಅಕ್ಕಿ ಕೊಡುತ್ತಿದ್ದು ನಾವು ಆ ರೇಟ್‌ನ್ನು ಇಳವಡಿಸಿಕೊಂಡು 30 ಪೈಸೆಯನ್ನು ಮಾತ್ರ ಜಾಸ್ತಿ ಮಾಡಿದ್ದೇವೆ. ಈ 190 ಕೋಟಿ ರೂಪಾಯಿಯನ್ನು ಇಟ್ಟಿರುವುದು ಏತಕ್ಕೆ ಅಂದರೆ ನಮಗೆ ಕೇಂದ್ರ ಸರ್ಕಾರ ಸಹಾಯ ಮಾಡತಕ್ಕಂಥ ಸಹಾಯ ಧನ 3.50 ಪೈಸೆಯಂತೆ ಬರೀ 28 ಲಕ್ಷ ಕಾರ್ಡ್‌ಗಳಿಗೆ ಮಾತ್ರ, ಇನ್ನು 34 ಕಾರ್ಡ್‌ಗಳಿಗೆ ರಾಜ್ಯ ಸರ್ಕಾರ ಸಬ್ಸಿಡಿ ಕೊಡುತ್ತಾ ಇದ್ದೇವೆ. ಅದಕ್ಕೋಸ್ಕರ 190 ಕೋಟಿ ರೂಪಾಯಿಯನ್ನು ಇಟ್ಟುಕೊಂಡಿದ್ದೇವೆ. ಅದರಿಂದ ನಮಗೆ ಸಬ್ಸಿಡಿ ಕಡಿಮ ಆಗಿರತಕ್ಕಂಥದ್ದು ಸುಮಾರು 70-80 ಕೋಟಿ ಮಾತ್ರ, ಕೇಂದ್ರ ಸರ್ಕಾರ ಸಹಾಯಕ್ಕೆ ಬಂದಿರುವುದರಿಂದ ಇದರಲ್ಲಿ ನಮಗೆ ಬಹಳ ಲಾಭ ಆಯಿತು ಅಥವಾ ಕಡಿಮೆ ಮಾಡಬೇಕು ಎಂಬ ಉದ್ದೇಶ ಅಲ್ಲ.

ವಿಷಯ : ಉಡುಪಿಯಲ್ಲಿನ ಕಾರಾಗೃಹದ ಸ್ಥಳಾಂತರ.

248(2041)-ಶ್ರೀ ಯು. ಆರ್. ಸಭಾಪತಿ (ಉಡುಪಿ) (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉಡುಪಿ ನಗರದ ಮಧ್ಯದಲ್ಲಿರುವ ಕಾರಾಗೃಹವನ್ನು ಸ್ಥಳಾಂತರ ಮಾಡುವ ಉದ್ದೇಶ ಸರ್ಕಾರದಲ್ಲಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಸ್ಥಳಾಂತರ ಮಾಡಲಾಗುವುದು

(ಶ್ರೀ ವಿ. ಸೋಮಣ್ಣ) ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು.

ಅ) ಹೌದು

ಆ) ಸ್ಥಳಾಂತರ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಯು. ಆರ್. ಸಭಾಪತಿ : ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ 6 ತಿಂಗಳ ಹಿಂದೆ ಮಾನ್ಯ ಸಚಿವರು ಉಡುಪಿಗೆ ಭೇಟಿ ಕೊಟ್ಟಾಗ ನಗರದ ಮಧ್ಯ ತಾಲ್ಲೂಕು ಕಛೇರಿ ಹಿಂಭಾಗದಲ್ಲಿ ಇರತಕ್ಕಂಥ ಸುಮಾರು 4800 ಚದುರಡಿ ವಿಸ್ತೀರ್ಣದ ಈ ಕಾರಾಗೃಹವನ್ನು ಅಲ್ಲಿಂದ ಸ್ಥಳಾಂತರ ಮಾಡಿ ನಮಗೆ ಜಿಲ್ಲಾ ಅಧಿಕಾರಿಗಳ ಕೇಂದ್ರಕ್ಕೆ ಆ ಕಟ್ಟಡವನ್ನು ಒದಗಿಸಬೇಕೆಂದು ನಾನು ಕೇಳಿಕೊಂಡಿದ್ದೆ. ಕಂದಾಯ ಇಲಾಖೆಯ ತಹಶೀಲ್ದಾರರಿಗೆ, ಜಿಲ್ಲಾಧಿಕಾರಿಗಳಿಗೆ ಅದನ್ನು ಬೇರೆ ಜಾಗಕ್ಕೆ ಸ್ಥಳಾಂತರ ಮಾಡುವುದಕ್ಕೆ ಬೇರೆ ಜಾಗವನ್ನು ಪ್ರಸ್ತಾವಿ ಕಳುಹಿಸಬೇಕೆಂದು ಕೇಳಿಕೊಂಡಿದ್ದೆ. ಆ ಪ್ರಸ್ತಾವನೆ ತಮಗೆ ಈವತ್ತು ಜಿಲ್ಲಾಧಿಕಾರಿಗಳಿಂದ ಬಂದಿದೆ.

ಶ್ರೀ ವಿ. ಸೋಮಣ್ಣ : ನಾನು ಮತ್ತು ಸನ್ಮಾನ್ಯ ಸಭಾಪತಿಯವರು ಆ ಒಂದು ಕಾರಾಗೃಹಕ್ಕ ಭೇಟಿ ನೀಡಿದ್ದೇವೆ. ಇದು ಜಿಲ್ಲಾ ಕೇಂದ್ರವಾಗಿರುವುದರಿಂದ.

ಅಧ್ಯಕ್ಷರು : ಸಭಾಪತಿ ಎಂದರೆ ಯಾರು? ವಿಧಾನ ಪರಿಷತ್ತಿನ ಸಭಾಪತಿಗಳೇ ಅಥವಾ ಈ ಸಭಾಪತಿಗಳೆ?

ಶ್ರೀ ವಿ. ಸೋಮಣ್ಣ : ಇಲ್ಲಿಯ ಸದಸ್ಯರು ಸನ್ಮಾನ್ಯ ಅಧ್ಯಕ್ಷರೇ ಭೇಟಿ ಮಾಡಿದ ಮೇಲೆ ಅದು ತಾಲ್ಲೂಕು ಜೈಲು ಆಗಿದ್ದರಿಂದ ಇರತಕ್ಕಂಥ ವ್ಯವಸ್ಥೆ ನೋಡಿ ತಕ್ಷಣವೇ ನಾನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ತಿಳಿಸಿ, ತದನಂತರ ಬೆಂಗಳೂರಿಗೆ ಬಂದ ಮೇಲೆ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದು ಅವರ ಜೊತೆಯಲ್ಲಿ ಮಾತನಾಡಿದ ಮೇಲೆ ಮಂಗಳೂರಿನಲ್ಲಿ ಜಾಗವನ್ನು ಕೊಟ್ಟಿದ್ದಾರೆ. ಈಗ ಅದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವಂತಹ ಒಂದು ಪ್ರಸ್ತಾವನೆ ಸರ್ಕಾರ ಈಗಾಗಲೇ ತೀರ್ಮಾನ ಕೈಗೊಂಡಿರುವುದರಿಂದ, ನಾವು ತಾಲ್ಲೂಕು ಬಂದಿ ಮಾಡಿ ಮತ್ತೆ ಇದು ಆಗುವುದುರ

ಬದಲಿಗೆ ಜಿಲ್ಲಾ ಕಾರಾಗೃಹ ಆಗಬೇಕು ಎಂಬುವ ತೀರ್ಮಾನ ಆಗಿರುವುದರಿಂದ ಮಂಗಳೂರಿನ ಜಿಲ್ಲಾಧಿಕಾರಿಗಳಿಗೆ ಹೋದವಾರ ನಾನು ಈಗಾಗಲೇ ತಿಳಿಸಿದ್ದೇನೆ. ತಕ್ಷಣವೇ ಜಾಗವನ್ನು ಗುರುತಿಸಿ ಕೊಟ್ಟು ತಕ್ಷಣ ಅದನ್ನು ಮಾಡಬೇಕು ಎಂದು ಅಲ್ಲಿಯವರೆಗೆ ತಾವು ಒಂದು ಕಛೇರಿಯನ್ನು ಮಾಡಬೇಕಾಗುತ್ತದೆ ನಮಗೆ ಬಿಟ್ಟು ಕೊಡಿ ಎಂದು ಹೇಳಿದ್ದೀರಿ, ನಾನು ಮತ್ತೊಮ್ಮೆ ಈ ಸದನದ ಮಧ್ಯದಲ್ಲಿ ಯಾವಾಗಲಾದರೂ ಹೋದರೆ ನಮಗೆ ಬೇರೆ ಯಾವುದಾದರೂ ಸ್ಥಳಾಂತರ ಮಾಡುವುದಕ್ಕೆ ಜಾಗ ಕೊಡುವುದಾದರೆ ಆ ಜಾಗವನ್ನು ನಿಮಗೆ ಬಿಟ್ಟು ಕೊಡುತ್ತೇವೆ. ನಾವು ಕಟ್ಟಡ ಕಟ್ಟಬೇಕಾದರೆ ಅಲ್ಪಸ್ವಲ್ಪ ದಿನಗಳು ಆಗುವುದರಿಂದ ಜಿಲ್ಲಾ ಕಾರಾಗೃಹ ಆಗುವುದರಿಂದ ಏನು ಇವತ್ತು ಇರತಕ್ಕಂಥ ಕಾರಾಗೃಹವಿದೆ ಅದನ್ನು ನೀವು ಬೇರೆ ಕಡೆ ಕಛೇರಿ ಮಾಡ ಬೇಕಾದ ಅವಶ್ಯಕತೆ ಇರುವುದರಿಂದ ಬೇರೆ ಸಣ್ಣದಾಗಿರತಕ್ಕಂಥ ಒಂದು ಕಟ್ಟಡವನ್ನು ಒದಗಿಸಿಕೊಟ್ಟರೆನಾವು ತಕ್ಷಣ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಸಚಿವರು ಕನ್ವಿನ್ಸಿಂಗ್ ರಿಪ್ಲೈಯನ್ನು ಕೊಟ್ಟಿದ್ದಾರೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ ಆ ಕುರಿತು ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆಯು ಬಂದಿದೆಯೇ ಎಂಬುದಾಗಿದೆ.

ಶ್ರೀ ವಿ. ಸೋಮಣ್ಣ : ನಾವು ಪ್ರಸ್ತಾವನೆಯನ್ನು ತರಿಸಿಕೊಂಡು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಕೇಂದ್ರ ಕಾರಾಗೃಹವನ್ನು ಕೂಡ ಮಾಡುತ್ತೇವೆ.

ಅಧ್ಯಕ್ಷರು : ಹಾಗಾದರೆ ಸಭಾಪತಿಯವರಿಗೆ ಜಿಲ್ಲೆಯೂ ಆಯಿತು, ಜೈಲೂ ಆಯಿತು.

ವಿಷಯ : ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಕೃಪಾಂಕದ ಪ್ರಮಾಣ

249 (2113)-ಶ್ರೀ ಎ. ರಾಮದಾಸ. (ಕೃಷ್ಣರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯ ಸರ್ಕಾರದ ವಿವಿಧ ಹಂತದ ನೇಮಕಾತಿಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಈಗಿರುವ ಕೃಪಾಂಕದ ಪ್ರಮಾಣವೆಷ್ಟು

ಆ) ಈ ಕೃಪಾಂಕದ ಪ್ರಮಾಣವನ್ನು ಸರ್ಕಾರವು ಹೆಚ್ಚಿಸಲು ನಿರ್ಧರಿಸಿದೆಯೇ, ಹಾಗಿದ್ದಲ್ಲಿ, ಪ್ರತಿಶತ ಎಷ್ಟನ್ನು ಹೆಚ್ಚಿಸಲು ನಿರ್ಧರಿಸಿದೆ.

ಇ) ಇದು ಯಾವಾಗಿನಿಂದ ಜಾರಿಗೆ ಬರಲಿದೆ. ಪೂರ್ಣ ವಿವರ ನೀಡುವುದು